ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

ಪ್ರಶ್ನೆ: ಬೆಳಗಾವಿ ತಾಲೂಕಿನ ಹೊಸವಂಟಮೂರಿ ಗ್ರಾಮದಲ್ಲಿ ಎಲ್ಲರೆದುರೇ ಮಹಿಳೆಯನ್ನು ಅರೆ ಬೆತ್ತಲುಗೊಳಿಸಿ ಕಂಬಕ್ಕೆ ಕಟ್ಟಿ ಚಪ್ಪಲಿಯಿಂದ ಥಳಿಸಿರುವ ಘಟನೆ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ಈ ಘಟನೆ ಅತ್ಯಂತ ಅಮಾನವೀಯವಾಗಿದ್ದು, ನಾಗರೀಕ ಸಮಾಜ ತಲೆ ತಗ್ಗಿಸುವಂತಾಗಿದೆ. ಸಂತ್ರಸ್ತೆ ಎಷ್ಟೇ ಕಿರುಚಾಡಿದರೂ ಸ್ಪಂದಿಸದೆ ಮೃಗದಂತೆ ವರ್ತಿಸಿದರು. ದೌರ್ಜನ್ಯ ಮಾಡಬೇಡಿ ಎಂದು ಮಹಿಳೆ ರಕ್ಷಣೆಗೆ ಮುಂದಾದವರನ್ನು ಕೂಡ ಥಳಿಸಿದರು.

ಈ ಪ್ರಕರಣದಲ್ಲಿ 7 ಜನ ಆರೋಪಿಗಳನ್ನು ಪೊಲೀಸರು ಬಂಧಿಸಿರುವುದು ಸರಿಯಷ್ಟೆ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಈ ಘಟನೆಗೆ ಸಂಬಂಧಿಸಿದಂತೆ ವಿಭಾಗೀಯ ಪೀಠ ಸಂಬಂಧ ಸಂತ್ರಸ್ತೆಯ ಗುರುತು ಸಿಗುವಂತೆ ಚಿತ್ರಿಸಿರುವ ಯಾವುದೇ ಛಾಯಾಚಿತ್ರಗಳು ಮತ್ತು ವಿಡಿಯೋಗಳನ್ನು ಪ್ರಸಾರ ಮಾಡದಂತೆ ನಿರ್ಬಂಧ ವಿಧಿಸಿದೆ. ಆದುದರಿಂದ ಈ ಘಟನೆಗೆ ಸಂಬಂಧಿಸಿದ ಆರೋಪಿಗಳಿಗೆ ಉಗ್ರಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳುವುದರ ಮೂಲಕ ಸಮಾಜದಲ್ಲಿ ಮತ್ತೊಮ್ಮೆ ಇಂತಹ ಘಟನೆಗಳು ಮರುಕಳಿಸದಂತೆ ನೋಡುಕೊಳ್ಳುವ ಬಗ್ಗೆ ಪ್ರಸ್ತಾಪಿಸಿರುವ ಕುರಿತು.

***

ಉತ್ತರ: ಶ್ರೀಮತಿ ಕಮಲವ್ವಾ ಲಗಮಪ್ಪಾ ಗಡಕರಿ ರವರಿಗೆ ದಿನಾಂಕ: 11.12.2023 ರಂದು ಬೆಳಗಿನ ಜಾವ 01.00 ಗಂಟೆಗೆ 1)ಬಸಪ್ಪಾ ರುದ್ರಪ್ಪಾ ನಾಯಿಕ 2)ರಾಜು ನಾಯಿಕ 3)ಕೆಂಪಣ್ಣಾ ನಾಯಿಕ 4)ಪಾರ್ವತಿ ಬಸಪ್ಪಾ ನಾಯಿಕ 5)ಯಲ್ಲಪ್ಪಾ ನಾಯಿಕ 6)ಲಕ್ಕಪ್ಪ ನಾಯಿಕ 7)ಗಂಗವ್ವಾ ಬಸಪ್ಪಾ ವಾಲಿಕರ 8)ಸಂಗೀತಾ ಸದಾಶಿವ ಹೆಗ್ಗನಾಯಿಕ 9)ಪ್ರದೀಪ ನಾಯಿಕ 10)ಸಂತೋಷ ನಾಯಿಕ 11)ಶೋಭಾ ರಾಜಪ್ಪಾ ನಾಯಿಕ 12)ಲಕ್ಕವ್ವಾ ಯಲ್ಲಪ್ಪಾ ನಾಯಿಕ ಇವರೆಲ್ಲರೂ ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ಸಂತ್ರಸ್ತೆಯ ಮನೆಗೆ ಹೋಗಿ, ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಲ್ಲಿನಿಂದ ಮನೆಯ ಮುಂದಿನ ಬಾಗಿಲಗೆ ಹಾಗೂ ಹಂಚುಗಳಿಗೆ ಕಲ್ಲುಗಳನ್ನು ಒಗೆದು ಹಂಚುಗಳನ್ನು ಪುಡಿ ಪುಡಿ ಮಾಡಿ ಮನೆಯ ಬಾಗಿಲನ್ನು ಮುರಿದು, ಮನೆಯ ಒಳಗೆ ಬಂದು ಮನೆಯ ಸಾಮಾನುಗಳನ್ನು ಚೆಲ್ಲಾಪಿಲ್ಲಿ ಮಾಡಿ ಕೊಲೆ ಮಾಡುವ ಉದ್ದೇಶದಿಂದ ಬಡಿಗೆಗಳಿಂದ ಬಡಿದು, ಕುತ್ತಿಗೆ ಹಿಚುಕಿ ಕೊಲೆ ಮಾಡಲು ಪ್ರಯತ್ನಿಸಿ, ಅವರ ಕೊರಳಲ್ಲಿಯ ಮಂಗಲಸೂತ್ರವನ್ನು ಕಿತ್ತು ಬಿಸಾಕಿ, ಅವಳನ್ನು ಮನೆಯಿಂದ ಹೊರಗಡೆ ಎಳೆದುಕೊಂಡು ಹೋಗಿ, ಅವರ ಮೈಮೇಲಿನ ಬಟ್ಟೆಗಳನ್ನು ಕಿತ್ತು ಬಿಸಾಕಿ ಬೆತ್ತಲೆ ಮಾಡಿ, ಲೈಟ್ ಕಂಬಕ್ಕೆ ಹಗ್ಗದಿಂದ ಕಟ್ಟಿ ಕಾಲಿನಿಂದ ಒದ್ದು ಮತ್ತು ಕೈಗಳಿಂದ ಹಲ್ಲೆ ಮಾಡಿ, ಪ್ರಾಣ ಬೆದರಿಕೆ ಹಾಕಿರುತ್ತಾರೆ.

ನಂತರ 3.30 ಗಂಟೆ ಸುಮಾರಿಗೆ ಪೊಲೀಸರು ಹಾಗೂ ಆಕೆಯ ಇಬ್ಬರು ಸಂಬಂಧಿಕರು ಸ್ಥಳಕ್ಕೆ ಬಂದು ಅವರಿಗೆ ಕಟ್ಟಿದ ಹಗ್ಗವನ್ನು ಬಿಚ್ಚಿ, ಬಟ್ಟೆ ತೊಡಿಸಿ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲಿಸಿದ್ದು, ಸಂತ್ರಸ್ತೆಯು ಈ ಬಗ್ಗೆ 1) ಬಸಪ್ಪಾ ರುದ್ರಪ್ಪಾ ನಾಯಿಕ ಮತ್ತು 11 ಜನರ ಮೇಲೆ ಕಾನೂನು ಕ್ರಮ ಜರುಗಿಸಲು ಕೋರಿದಂತೆ, ಕಾಕತಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. 260/2023 ಕಲಂ 143, 147, 148, 341, 342, 327, 324, 323, 307, 452, 420, 427, 354(ಬಿ) ಸಹಕಲಂ 149 ಐಪಿಸಿ & 2(ಎ) ಪ್ರಿವೆನ್ಷನ್ ಆಫ್ ಡಿಸ್ಟ್ರಕ್ಷನ್ ಆ್ಯಂಡ ಲಾಸ್ ಆಫ್ ಪ್ರಾಪರ್ಟಿ ಆ್ಯಕ್ಟ 1981 ಅಡಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿರುತ್ತದೆ.

ಈ ಪ್ರಕರಣ ತುಂಬಾ ಸೂಕ್ಷ್ಮ ಪ್ರಕರಣವಾಗಿರುವದರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ಎಸಿಪಿ ಬೆಳಗಾವಿ ಗ್ರಾಮೀಣ ಉಪವಿಭಾಗ ರವರಿಗೆ ವಹಿಸಿಕೊಳ್ಳಲು ಆದೇಶಿಸಲಾಗಿದ್ದು, ಅದರಂತೆ ಎಸಿಪಿ ಬೆಳಗಾವಿ ಗ್ರಾಮೀಣ ರವರು ಪ್ರಕರಣದ ತನಿಖೆಯನ್ನು ವಹಿಸಿಕೊಂಡು ಆರೋಪಿತರಾದ 1) ಬಸಪ್ಪ ರುದ್ರಪ್ಪಾ ನಾಯಿಕ 2) ರಾಜು ರುದ್ರಪ್ಪಾ ನಾಯಿಕ 3) ಕೆಂಪಣ್ಣಾ ರಾಜು ನಾಯಿಕ 4) ಶ್ರೀಮತಿ.ಪಾರ್ವತಿ ಬಸಪ್ಪಾ ನಾಯಿಕ 5) ಶ್ರೀಮತಿ ಯಲ್ಲವ್ವಾ ರುದ್ರಪ್ಪಾ ನಾಯಿಕ 6) ಶ್ರೀಮತಿ.ಗಂಗವ್ವಾ ಬಸಪ್ಪಾ ವಾಲೀಕರ 7) ಶ್ರೀಮತಿ.ಸಂಗೀತಾ ಸದಾಶಿವ ಹೆಗ್ಗನಾಯಿಕ ಇವರನ್ನು ದಿನಾಂಕಃ 11.12.2023 ರಂದು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ. ಮುಂದುವರೆದ ತನಿಖೆಯಲ್ಲಿ ಇನ್ನೊಬ್ಬ ಆರೋಪಿತನಾದ-ಶಿವಪ್ಪ ರಾಯಪ್ಪಾ ವಣ್ಣೂರಿ ಇತನನ್ನು ದಿನಾಂಕ : 12.12.2023 ರಂದು ಬಂಧಿಸಿ ಕಾನೂನು ಕ್ರಮ ಜರುಗಿಸಿದ್ದು, ಬಾಕಿ ಉಳಿದ ಆರೋಪಿಗಳನ್ನು ಬಂಧಿಸಿ, ತನಿಖೆ ಪೂರ್ಣಗೊಳಿಸಿ, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗುವುದು. ಪ್ರಸ್ತುತ ಹೊಸ ವಂಟಮೂರಿ ಗ್ರಾಮದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ 2 ಕೆ.ಎಸ್.ಆರ್.ಪಿ. ತುಕಡಿಗಳನ್ನು ನಿಯೋಜಿಸಲಾಗಿದೆ. ಅಲ್ಲದೇ ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿರುವ ಸಂತ್ರಸ್ತ ಮಹಿಳೆಯ ರಕ್ಷಣೆಗಾಗಿ ಓರ್ವ ಮಹಿಳಾ ಪಿಎಸ್ಐ ಹಾಗೂ ಇಬ್ಬರು ಮಹಿಳಾ ಕಾನ್ಸ್ಟೇಬಲ್ ರವರನ್ನು ನಿಯೋಜಿಸಲಾಗಿದೆ.

ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರ ಪತ್ರ ದಿನಾಂಕ 12.12.2023 ರಲ್ಲಿ ಜಿಲ್ಲಾ ವಾರ್ತಾ ಅಧಿಕಾರಿಗಳು, ಬೆಳಗಾವಿ ರವರಿಗೆ ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶ ದಿನಾಂಕ 12.12.2023 ರಲ್ಲಿ ನೀಡಿದ ನಿರ್ದೇಶನಗಳನ್ವಯ ಸದರಿ ಆದೇಶದಲ್ಲಿ ತಿಳಿಸಲಾದ ಅಂಶಗಳ ಕುರಿತು ಎಲ್ಲ ಪತ್ರಿಕೆ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ತಿಳಿಸಿ ಅದರಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲು ಕೋರಲಾಗಿದೆ. ಅದರನ್ವಯ ಜಂಟಿ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರು ರವರ ಪತ್ರ ದಿನಾಂಕ 12.12.2023 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಆದೇಶವನ್ನು ಪಾಲಿಸುವ ಸಂಬಂಧವಾಗಿ ರಾಜ್ಯದ ಎಲ್ಲ ಪ್ರಧಾನ ಸಂಪಾದಕರು/ಸಂಪಾದಕರು, ಪತ್ರಿಕಾ /ವಿದ್ಯುನ್ಮಾನ ವಾಹಿನಿಗಳಿಗೆ ಪತ್ರ ಬರೆದು ನ್ಯಾಯಾಲಯದ ಆದೇಶವನ್ನು ಯಥಾವತ್ತಾಗಿ ಪಾಲಿಸುವಂತೆ ತಿಳಿಸಲಾಗಿದೆ ಹಾಗೂ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಸುದ್ದಿ ವಾಹಿನಿಗಳು ಸದರಿ ವಿಷಯದ ಸುದ್ದಿಗಳನ್ನು ಮುದ್ರಿಸಿ/ಪ್ರಸಾರ/ಬಿತ್ತರಿಸಿದಲ್ಲಿ ಅಂತಹ ಮಾಧ್ಯಮಗಳೇ ಮುಂದಿನ ಆಗುಹೋಗುಗಳಿಗೆ ಜವಾಬ್ದಾರರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ಉಪನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಳಗಾವಿ ರವರಿಗೆ ದಿ: 14.12.2023 ರಂದು ಪತ್ರ ಬರೆದು ಸದರಿ ವಿಷಯದ ಸುದ್ದಿಗಳನ್ನು ಘಟನೆ ಜರುಗಿದ ದಿನದಿಂದ ಈ ವರೆಗೆ ಸಂತ್ರಸ್ತೆಯ ಭಾವ ಚಿತ್ರವನ್ನು ಗುರುತು ಸಿಗುವಂತೆ ಚಿತ್ರಿಸಿರುವ ಯಾವುದೇ ಛಾಯಾಚಿತ್ರಗಳು ಮತ್ತು ವಿಡಿಯೋಗಳು ಇದ್ದಲ್ಲಿ, ಅವುಗಳನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಲು ಕೋರಲಾಗಿದೆ.

**ಸಂಖ್ಯೆ: ಹೆಚ್‌ಡಿ 56 ಪಿಸಿಕ್ಯೂ 2023**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು.